**ಕರ್ನಾಟಕ ವಿಧಾನ ಪರಿಷತ್ತು**
**ನೂರ ಮೂವತ್ತನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**<u>ಕಾರ್ಯಕಲಾಪಗಳ ಪಟ್ಟಿ</u>**
**ಬುಧವಾರ, ದಿನಾಂಕ: 13ನೇ ಜುಲೈ, 2016**
**(ಸಮಯ: ಬೆಳಗ್ಗೆ: 11.00 ಗಂಟೆಗೆ)**

******

## 01. ಪ್ರಶ್ನೋತ್ತರ

| | | | |
|---|---|---|---|
| ಅ) | ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು | : | ಹತ್ತೊಂಭತ್ತನೆಯ ಪಟ್ಟಿ |
| ಆ) | **<u>ತಡೆಹಿಡಿಯಲಾದ ಪ್ರಶ್ನೆಗಳು:</u>**<br>1) ಶ್ರೀ ಐವನ್ ಡಿ'ಸೋಜಾ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 189(1569) ಪಟ್ಟಿ-13, ಸಮೂಹ-01 | : | **ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು** |
| | 2) ಶ್ರೀ ರಘುನಾಥ ರಾವ್ ಮಲ್ಕಾಪುರೆ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:252(1884) ಪಟ್ಟಿ- 17, ಸಮೂಹ- 01 | : | **ಮಾನ್ಯ ಕಂದಾಯ ಸಚಿವರು** |
| ಇ) | ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು | : | ಹತ್ತೊಂಭತ್ತನೆಯ ಪಟ್ಟಿ |

## 02. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ) ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ ಒಂದನೇ ಹಾಗೂ ಎರಡನೇ ಪಟ್ಟಿಗಳ ರೀತ್ಯಾ.

ಆ) ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **2016ನೇ ಸಾಲಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ವಿಧೇಯಕ**ವನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

## 03. ವರದಿಗಳನ್ನೊಪ್ಪಿಸುವುದು

**ಅ) ಶ್ರೀ ಎಸ್.ವ್ಹಿ. ಸಂಕನೂರ, (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)** ಅವರು 2015-16ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಮೂವತ್ತೊಂದನೆಯ ವರದಿಯನ್ನು ಒಪ್ಪಿಸುವುದು.

**ಆ) ಶ್ರೀ ಆರ್. ಧರ್ಮಸೇನಾ, (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ)** ಅವರು ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2015-16ನೇ ಸಾಲಿನ 14ನೇ ವಿಧಾನ ಸಭೆಯ ನಾಲ್ಕನೇ ವರದಿಯನ್ನು ಒಪ್ಪಿಸುವುದು.

..2

## ೦4. ಶಾಸನ ರಚನೆ

**<u>ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು</u>**

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ವಿಧೇಯಕ, 2016**

**ಶ್ರೀ ಎಚ್.ಕೆ. ಪಾಟೀಲ್** (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರು:-

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2016ನೇ ಸಾಲಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

## ೦5. ಗಮನ ಸೆಳೆಯುವ ಸೂಚನೆಗಳು

**ಅ) ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು ವರಾಹಿ ನೀರಾವರಿ ಯೋಜನೆಯ ಕಾಲುವೆಯನ್ನು ಉಡುಪಿ ತಾಲ್ಲೂಕಿನ ಹೆಜಮಾಡಿಯವರೆಗೂ ಮುಂದುವರೆಸಿ, ಕೆರೆಗಳನ್ನು ತುಂಬಿಸುವ ಯೋಜನೆ ಬಗ್ಗೆ **ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ** ಗಮನ ಸೆಳೆಯುವುದು.

**ಆ) ಶ್ರೀ ಐವನ್ ಡಿ'ಸೋಜಾ** ಅವರು ಅಂತರ್ಜಲ ಕುಸಿತದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಿನ ಅಭಾವ ಉಂಟಾಗಿರುವುದರಿಂದ ಅಂತರ್ಜಲ ವೃದ್ಧಿಸಲು ಇಲಾಖೆಯ ಮುಂದಿರುವ ಯೋಜನೆಗಳ ಬಗ್ಗೆ **ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರ** ಗಮನ ಸೆಳೆಯುವುದು.

## ೦6. ನಿಯಮ 330ರ ಮೇರೆಗೆ

**ಅ) ಶ್ರೀ ರಾಮಚಂದ್ರಗೌಡ** ಅವರು ಬೆಂಗಳೂರು ನಗರದ ಕೆಲವು ಕೆರೆಗಳಲ್ಲಿ ವಿಷಯುಕ್ತ ಹಾಗೂ ಹಾನಿಕಾರಕವಾದ ನೊರೆ ಸಮಸ್ಯೆಯಿಂದಾಗಿ ಲಕ್ಷಾಂತರ ಮೀನುಗಳು ಸಾವನ್ನಪ್ಪಿದ್ದು ಹಾಗೂ ಕೆರೆಗಳ ಸುತ್ತಮುತ್ತಲಿನ ಸಾರ್ವಜನಿಕರ ಆರೋಗ್ಯಕ್ಕೆ ದುಷ್ಪರಿಣಾಮವುಂಟಾಗುತ್ತಿರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು)**

**ಆ) ಶ್ರೀ ಪುಟ್ಟಣ್ಣ** ಅವರು ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993-94 ಮತ್ತು 1994-95ರಲ್ಲಿ ಸೇವೆ ಸಲ್ಲಿಸಿ, ಶೇ 55% ಕ್ಕಿಂತ ಕಡಿಮೆ ಅಂಕ ಪಡೆದ ಅರೆಕಾಲಿಕ ಉಪನ್ಯಾಸಕರಗಳ ಸೇವಾ ಸಕ್ರಮಾತಿ ಮಾಡುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

**ಶ್ರೀನಿವಾಸ**
**ಕಾರ್ಯದರ್ಶಿ(ಪ್ರ)**

---